**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 749/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - ರಾಜು | | **ಚಾ.ಸಾ.-8** |
| ತಂದೆಯ ಹೆಸರು | - ಮುದ್ದುಶೆಟ್ಟಿ | | **ಫ್ರಾ.ಸಾ.-10** |
| ವಯಸ್ಸು | - 47 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಮುಂಡಕದೊರೆ | | |

ದಿನಾಂಕಃ 13.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1, 3 ರಿಂದ 7, 9 ರಿಂದ 11 ರವರ ಪರಿಚಯವಿರುತ್ತದೆ. ಆರೋಪಿತರ ಪರಿಚಯವಿರುತ್ತದೆ. ಚಾ.ಸಾ. 1 ಮತ್ತು ಆರೋಪಿ 1 ರವರ ಮದುವೆ ಮಾತುಕತೆಗೆ 2013 ರಲ್ಲಿ ನಾನು, ಚಾ.ಸಾ. 3, 4, 5 ರಿಂದ 7, 9 ರಿಂದ 11 ರವರು ಚಾ.ಸಾ. 1 ರವರ ಮನೆಯಲ್ಲಿ ಮದುವೆ ಮಾತುಕತೆಗೆ ಸೇರಿರುತ್ತೇವೆ. ಸದರೀ ಮದುವೆ ಮಾತುಕತೆಗೆ ಆರೋಪಿಗೆ 100 ಗ್ರಾಂ ಚಿನ್ನ ಹಾಗೂ 50 ಸಾವಿರ ನಗದು ಹಣವನ್ನು ನೀಡಿ, ಶ್ರೀರಂಗಪಟ್ಟಣದ ಐಯಪ್ಪಸ್ವಾಮಿ ಕಲ್ಯಾಣಮಂಟಪದಲ್ಲಿ ಮದುವೆ ಮಾಡಿಕೊಡಲು, ಮಾತುಕತೆಯಾಗಿರುತ್ತದೆ. ಅದರಂತೆ ದಿನಾಂಕಃ 02.06.2013 ರಂದು ಚಾ.ಸಾ. 1 ಮತ್ತು ಆರೋಪಿ 1 ರವರ ಮದುವೆಯಾಗಿರುತ್ತದೆ. ಮದುವೆಯಾದ ನಂತರ ಆರೋಪಿತರು ಮತ್ತು ಚಾ.ಸಾ. 1 ರವರ ನಡುವೆ ಹೆಚ್ಚಿನ ವರದಕ್ಷಿಣೆಗಾಗಿ ಆಗಾಗ ಕಿರುಕುಳ ನೀಡಿ ಗಲಾಟೆ ಮಾಡುತ್ತಿದ್ದರು. ಮದುವೆ ಮಾತುಕತೆಗೆ ಸೇರಿದ್ದ ನಾವೆಲ್ಲರೂ ಸೇರಿ, ಮೂರು ನಾಲ್ಕು ಬಾರಿ ನ್ಯಾಯ ಪಂಚಾಯತಿ ಮಾಡಿ ಸಮಾಧಾನಪಡಿಸಿರುತ್ತೇವೆ. ನಂತರ ಆರೋಪಿತರು ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ಹೆಚ್ಚಿನ ವರದಕ್ಷಿಣೆಗಾಗಿ ಚಾ.ಸಾ. 1 ರವರಿಗೆ ಹಲ್ಲೆ ಮಾಡಿ, ಮನೆಯಿಂದ ಹೊರಗಡೆ ಕಳುಹಿಸಿರುತ್ತಾರೆ. ನಂತರ ಚಾ.ಸಾ. 1 ರವರು ಆರೋಪಿತರ ವಿರುದ್ಧ ಮದ್ದೂರು ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 2 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 4 ಮತ್ತು 5 ರವರುಗಳನ್ನು ನೋಡಿ ದರೆ ಗುರುತಿಸುತ್ತೇನೆ, ಆದರೆ ಅವರ ಗೈರು ಹಾಜರಿಗೆ

ವಿನಾಯಿತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಅವರನ್ನು ನೋಡಿ ಗುರುತಿಸಲು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ,

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ</u>**

ಮದುವೆಯ ಮಾತುಕತೆಯಂತೆ ವರದಕ್ಷಿಣೆಯಾಗಿ ವರನಿಗೆ 30 ಗ್ರಾಂ ಚಿನ್ನದ ಚೈನು, 5 ಗ್ರಾಂ ನ ಎರಡು ಉಂಗುರಗಳು ಹಾಗೂ ಚಾ.ಸಾ. 1 ರವರಿಗೆ 40 ಗ್ರಾಂ ಚಿನ್ನದ ಮಾಂಗಲ್ಯದ ಚೈನು, 2 ಜೊತೆ ಓಲೆ ಜುಮುಕಿ, 5 ಗ್ರಾಂ ನ ಒಂದು ಉಂಗುರ ಒಟ್ಟು 100 ಗ್ರಾಂ ಚಿನ್ನದ ಒಡವೆಗಳನ್ನು ಮಾಡಿಸಿ 50 ಸಾವಿರ ನಗದು ಹಣವನ್ನು ನೀಡಿ, ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸರಿ. ಆರೋಪಿ 1 ರವರು ಮದುವೆಯ ನಂತರ 3 ತಿಂಗಳು, ಚೆನ್ನಾಗಿ ನೋಡಿಕೊಂಡು 50 ಸಾವಿರ ಹಣ ತೆಗೆದುಕೊಂಡು ಬಾ ಎಂದು, ಅವರ ತಂದೆ ತಾಯಿ ಹಾಗೂ ನಾದಿನಿ ಮತ್ತು ನಾದಿನಿ ಗಂಡನ ಜೊತೆ ಸೇರಿ ಕಿರುಕುಳ ನೀಡಿ ಗಲಾಟೆ ಮಾಡಿ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡುತ್ತಿದ್ದಾರೆಂದು ಹಾಗೂ ಆರೋಪಿತರ ಕೋರಿಕೆಯಂತೆ 50 ಸಾವಿರ ಹಣವನ್ನು ಸಾಲ ಮಾಡಿ ಆರೋಪಿತರಿಗೆ ನೀಡಿರುವುದಾಗಿ ಚಾ.ಸಾ. 3 ರವರು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ಮತ್ತೇ 4-5 ತಿಂಗಳು ಚೆನ್ನಾಗಿ ನೋಡಿಕೊಂಡು ನಂತರ ಮತ್ತೇ ಹೆಚ್ಚಿನ ವರದಕ್ಷಿಣೆ ಹಣಕ್ಕಾಗಿ ಆರೋಪಿತರು ಚಾ.ಸಾ. 1 ರವರಿಗೆ ಕಿರುಕುಳ ನೀಡಿರುತ್ತಾರೆಂದು ಚಾ.ಸಾ. 3 ಮತ್ತು 4 ರವರು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ದಿನಾಂಕಃ 05.11.2019 ರಂದು, ರಾತ್ರಿ 11.00 ಗಂಟೆಯ ಸಮಯದಲ್ಲಿ ಆರೋಪಿತರು ಹೆಚ್ಚಿನ ವರದಕ್ಷಿಣೆ ಹಣಕ್ಕಾಗಿ ಚಾ.ಸಾ. 1 ರವರ ಮೇಲೆ ಹಲ್ಲೆ ಮಾಡಿ ಅವರ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯದ ಸರವನ್ನು ಬಿಚ್ಚಿಸಿಕೊಂಡು ಚಾ.ಸಾ. 1 ರವರಿಗೆ ಮನಬಂದಂತೆ ಹಲ್ಲೆ ಮಾಡಿ, ಮನೆಯಿಂದ ಹೊರಗಡೆ ಹಾಕಿದ್ದು, ಆ ಸಮಯದಲ್ಲಿ ಚಾ.ಸಾ. 2 ರವರು ಆರೋಪಿತರಿಗೆ ಬುದ್ದಿ ಹೇಳಿ ಚಿನ್ನದ ಮಾಂಗಲ್ಯದ ಸರವನ್ನು ವಾಪಸ್ಸು ಕೊಡಿಸಿ, ಚಾ.ಸಾ. 1 ರವರನ್ನು ಕಳುಹಿಸಿಕೊಟ್ಟಿರುತ್ತಾರೆಂದು ಚಾ.ಸಾ. 3 ರವರು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ದಿನಾಂಕಃ 22.11.2019 ರಂದು, ನೀವು ಹಾಗೂ ಚಾ.ಸಾ. 3 ರಿಂದ 7, 9 ರಿಂದ 11 ರವರು ನ್ಯಾಯ ಪಂಚಾಯತಿಗೆ ಸೇರಿದ್ದು, ಆ ಸಮಯದಲ್ಲಿ ಆರೋಪಿತರು, ಹೆಚ್ಚಿಗೆ ವರದಕ್ಷಿಣೆ ಹಣ ಕೊಟ್ಟರಷ್ಟೇ ಚಾ.ಸಾ. 1 ರವರನ್ನು ಮನೆಗೆ

ಸೇರಿಸುವುದು, ಇಲ್ಲಾ ಎಂದರೆ ಸೇರಿಸುವುದಿಲ್ಲ ಎಂದು ಹೇಳಿ ಹೊರಟುಹೋಗಿರುತ್ತಾರೆಂದರೆ ಸರಿ.

**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಲಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ, ಮದ್ದೂರು.